ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-01

ಸಂಖ್ಯೆ:ವಾಶಿ/ಹೊಸಗ.ಯಂ.ಶಿ.ಶಾಲೆ.ಪ್ರಾ/2022-23 ದಿನಾಂಕ:~~13~~20.04.2022

ಸುತ್ತೋಲೆ

2022-23ನೇ ಶೈಕ್ಷಣಿಕ ಸಾಲಿನಲ್ಲಿ ಕರ್ನಾಟಕ ರಾಜ್ಯದಾದ್ಯಂತ ಹೊಸದಾಗಿ ಗಣಕಯಂತ್ರ ಶಿಕ್ಷಣ ಶಾಲೆಗಳನ್ನು ಯಾವುದೇ ವ್ಯಕ್ತಿ ವೈಯಕ್ತಿಕವಾಗಿ ಗಣಕಯಂತ್ರ ಶಿಕ್ಷಣ ಶಾಲೆ ಪ್ರಾರಂಭಿಸಲು ಹಾಗೂ ವಾಣಿಜ್ಯ ಶಿಕ್ಷಣ ಶಾಲೆಗಳಲ್ಲಿ (ಬೆರಳಚ್ಚು ಮತ್ತು ಶೀಘ್ರಲಿಪಿ) ಜೊತೆಗೆ ಗಣಕಯಂತ್ರ ಶಿಕ್ಷಣ ಶಾಲೆ ಪ್ರಾರಂಭಿಸಲು ಏಪ್ರಿಲ್ 1 ರಿಂದ ಏಪ್ರಿಲ್ 31 ರ ವರೆಗೆ **ಬೆಂಗಳೂರು ವಿಭಾಗಕ್ಕೆ ಸಂಬಂಧಪಟ್ಟಂತೆ ಸಹನಿರ್ದೇಶಕರು-1, ಬೆಂಗಳೂರು ವಿಭಾಗ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು ಇವರಿಗೆ ಅರ್ಜಿ ಸಲ್ಲಿಸಬಹುದಾಗಿದೆ..** ಗುಲಬರ್ಗಾ ವಿಭಾಗಕ್ಕೆ ಸಂಬಂಧಿಸಿದಂತೆ ಸಹನಿರ್ದೇಶಕರು, ಅಪರ ಆಯುಕ್ತರ ಕಛೇರಿ, ಗುಲಬರ್ಗಾ, ಇವರಿಗೆ, ಬೆಳಗಾವಿ ಹಾಗೂ ಮೈಸೂರು ವಿಭಾಗಗಳಿಗೆ ಸಂಬಂಧಪಟ್ಟಂತೆ, ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯಾ ವಿಭಾಗದ ಸಹನಿರ್ದೇಶಕರಿಗೆ ಅರ್ಜಿಯನ್ನು ಸಲ್ಲಿಸುವುದು. ಅರ್ಜಿಯೊಂದಿಗೆ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸುವುದು.

1. ಅರ್ಜಿ ನಮೂನೆ-1
2. ಅಂತರ ದೃಢೀಕರಣ ಪ್ರಮಾಣ ಪತ್ರ. [ಬಿ.ಬಿ.ಎಂ.ಪಿ/ ನಗರಸಭೆ/ಪಟ್ಟಣ ಪಂಚಾಯಿತಿ ಇವರಿಂದ ಪಡೆದ] ಈಗಾಗಲೇ ಅಸ್ತಿತ್ವದಲ್ಲಿರುವ ಅಧಿಕೃತ ವಾಣಿಜ್ಯ ಮತ್ತು ಗಣಕಯಂತ್ರ ಶಿಕ್ಷಣ ಸಂಸ್ಥೆಗೂ ಅಥವಾ ಗಣಕಯಂತ್ರ ಶಿಕ್ಷಣ ಸಂಸ್ಥೆಗೂ ಹಾಗೂ ಈಗ ಪ್ರಾರಂಭಿಸಲು ಉದ್ದೇಶಿಸಿರುವ ಶಾಲೆಗಳಿಗೂ ನಗರ ಪ್ರದೇಶದಲ್ಲಿ ಒಂದು ಕಿ.ಮೀ ವ್ಯಾಪ್ತಿಯ ಅಂತರ ಇರಬೇಕು. ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಎರಡು ಕಿ.ಮೀ ಅಂತರವಿರತಕ್ಕದ್ದು.
3. ಸ್ವಂತ ಕಟ್ಟಡವಿದ್ದಲ್ಲಿ ಕಟ್ಟಡದ ದಾಖಲೆಪತ್ರ [ಖಾತೆ ಪ್ರಮಾಣ ಪತ್ರ] / ಬಾಡಿಗೆ ಕಟ್ಟಡವಿದ್ದಲ್ಲಿ ಬಾಡಿಗೆ ಕರಾರು ಪತ್ರ ಮತ್ತು ಕಟ್ಟಡದ ಮಾಲೀಕರ ಒಪ್ಪಿಗೆ ಪತ್ರ.
4. ಆಯಾ ವಿಭಾಗದ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಹೆಸರಿಗೆ ರೂ:2000/- [ಎರಡು ಸಾವಿರ ರೂಗಳು ಮಾತ್ರ] ಮೊತ್ತದ ಡಿಮಾಂಡ್ ಡ್ರಾಫ್ಟ್.

ಹೆಚ್ಚಿನ ಮಾಹಿತಿಗಾಗಿ[ವೆಬ್‌ಸೈಟ್‌ವಿಳಾಸwww.schooleducation.kar.nic.in:-- secondaryeducation--- commerce education]ದಲ್ಲಿ ಪರಿಶೀಲಿಸುವುದು ಹಾಗೂ ಹಿರಿಯ ಸಹಾಯಕನಿರ್ದೇಶಕರು,[ವಾಣಿಜ್ಯ] ಆಯುಕ್ತರಕಛೇರಿ,ಸಾರ್ವಜನಿಕ ಶಿಕ್ಷಣ ಇಲಾಖೆ,ನೃಪತುಂಗರಸ್ತೆ,ಬೆಂಗಳೂರುಇವರನ್ನು ಸಂಪರ್ಕಿಸುವುದು.

ನಿರ್ದೇಶಕರು[ಪ್ರಾಢಶಿಕ್ಷಣ]
ಬೆಂಗಳೂರು-1



... COMMISSIONER OFFICE OF PUBLIC INSTRUCTION on 20/04/2022 ...

Scanned by CamScanner